**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 2827/2022

**ಪಿರ್ಯಾದಿ** : ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

**- ವಿರುದ್ಧ -**

**ಆರೋಪಿ/ತರು:**

1) ಕಿರಣ್ ಬಿನ್ ರವಿಕುಮಾರ, 29 ವರ್ಷ,
2) ಗುರು ಯಾನೆ ಗುರುಕಿರಣ ಬಿನ್ ಶಿವಣ್ಣ, 21 ವರ್ಷ,
3) ಪ್ರಮೋದ ಬಿನ್ ಮೂರ್ತಪ್ಪ, 21 ವರ್ಷ,
4) ಅಭಿ ಬಿನ್ ವೆಂಕಟೇಶ, 22 ವರ್ಷ,

ಎಲ್ಲರೂ ವಾಸ : ನಂದಿಹೊಸಳ್ಳಿ ಗ್ರಾಮ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು

****

**-:ದೋಷಾರೋಪಣೆ:-**

ಶ್ರೀಮತಿ ಊರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆಗಳೇನೆಂದರೆ:-

ದಿನಾಂಕ 14.09.2021 ರಂದು ಸಂಜೆ 07.00 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ನಂದಿಹೊಸಳ್ಳಿ ಗ್ರಾಮದಲ್ಲಿ ಚಾಸಾ-1 ತೇಜಸ್ ಮತ್ತು ಚಾಸಾ-2 ಗಿರೀಶರವರು ಭಗವತಿ ಕಟ್ಟೆಯ ಹತ್ತಿರ ಗಣಪತಿ ವಿಸರ್ಜನೆಗೆಂದು ಹೋಗುತ್ತಿರುವಾಗ ಆರೋಪಿತರಾದ ನೀವು ಎದುರುಗಡೆ ಬಂದಾಗ ಚಾಸಾ-1 ರವರು 1 ನೇ ಆರೋಪಿಯಾದ ನಿಮ್ಮನ್ನು ನಿಲ್ಲಿಸಿ ಸಣ್ಣ ಗಣಪತಿ ಬಿಡುವ ವೇಳೆಯಲ್ಲಿ ಏಕೆ ನನ್ನೊಂದಿಗೆ ಗಲಾಟೆ ಮಾಡಿದೆ ಎಂದು ಕೇಳಿದಾಗ ಆರೋಪಿತರಾದ ನೀವು ಸಮಾನ 1 ನೇ ಆರೋಪಿಯಾದ ನೀವು ಅಲ್ಲಿಯೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಹಣೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ 2 ರಿಂದ 4 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 26.10.2023

**ಸಹಿ**
**(ಊರ್ಮಿಳ.ವಿ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.**